# ಸುದ್ದಿ ಸಂಚಯ

## ೨೦೦೧ರ ಪೂರ್ಣ ಕುಂಭಮೇಳದಲ್ಲಿ ರಾಮಕೃಷ್ಣ ಮಿಷನ್ ಸೇವಾಶ್ರಮದ ಶಿಬಿರ

**ಜಗತ್ತಿನ ಧಾರ್ಮಿಕ ಉತ್ಸವಗಳಲಿ** ಅತ್ಯಂತ ದೊಡ್ಡದೂ ಹಾಗೂ ಪ್ರಖ್ಯಾತವೂ ಆದ ಕುಂಭಮೇಳವು ನೂತನ ಸಹಸ್ರಮಾನದ ಮೊಟ್ಟಮೊದಲ ಪೂರ್ಣ ಕುಂಭಮೇಳವಾಗಿ ಪ್ರಯಾಗದಲ್ಲಿ ಜರುಗಲಿದೆ. ೨೦೦೧ರ ೯ನೇ ಜನವರಿಯಿಂದ ೮ನೇ ಫೆಬ್ರುವರಿಯವರೆಗೂ ಜರುಗುವ ಈ ಮಹಾನ್ ಉತ್ಸವದಲ್ಲಿ ದೇಶ ವಿದೇಶಗಳಿಂದ ಒಂದೂವರೆ ಕೋಟಿ ಯಾತ್ರಾರ್ಥಿಗಳು ಹಾಗೂ ಸಾಧು ಸಂತರು ಪಾಲ್ಗೊಳ್ಳಲಿದ್ದಾರೆ.

ಅಲಹಾಬಾದಿನ ರಾಮಕೃಷ್ಣ ಮಿಷನ್ ಸೇವಾಶ್ರಮ ಕೇಂದ್ರವು ಹಿಂದಿನ ವರ್ಷಗಳಂತೆ ಈ ಬಾರಿಯೂ ಮೇಳಸ್ಥಾನದಲ್ಲಿ ಯಾತ್ರಾರ್ಥಿಗಳ ಹಾಗೂ ಸಾಧುಗಳ ಸೇವೆಗಾಗಿ ಶಿಬಿರವನ್ನು ತೆರೆಯಲಿದೆ. ಈ ಶಿಬಿರವು ಈ ಕೆಳಕಾಣಿಸಿದ ಸೇವಾ ಕಾರ್ಯಗಳನ್ನು ಹಮ್ಮಿಕೊಳ್ಳುವ ಯೋಜನೆಯೊಂದನ್ನು ರೂಪಿಸಿದೆ:

೧) ಸುಸಜ್ಜಿತ ಕ್ಲಿನಿಕ್ ಮೂಲಕ ಎಲ್ಲರಿಗೂ ಉಚಿತ ಚಿಕಿತ್ಸೆ.

೨) ಸತ್ಸಂಗಕ್ಕಾಗಿ ದೇವಸ್ಥಾನದಿಂದ ಕೂಡಿದ ಒಂದು ವಿಶಾಲ ಪೆಂಡಾಲ್.

೩) ಸುಮಾರು ಸಾವಿರ ಜನ ಯಾತ್ರಾಕಾಂಕ್ಷಿಗಳಿಗೆ ಉಚಿತ ಊಟ ಮತ್ತು ತಂಗುವ ವ್ಯವಸ್ಥೆ.

೪) ಸಾಧು ಸಂತರಿಗೆ ಹಾಗೂ ಸ್ವಯಂ ಸೇವಕರಿಗೆ ಉಚಿತ ಊಟ ಮತ್ತು ತಂಗುವ ವ್ಯವಸ್ಥೆ.

೫) ರಾಮಕೃಷ್ಣ ವಿವೇಕಾನಂದ ಹಾಗೂ ವೇದಾಂತ ಸಾಹಿತ್ಯದ ಪ್ರಸರಣೆಗಾಗಿ ಒಂದು ಪುಸ್ತಕ ಕೇಂದ್ರ.

೬) ಶ್ರೀರಾಮಕೃಷ್ಣ,ಶ್ರೀಮಾತೆ ಶಾರದಾದೇವಿ ಹಾಗೂ ಸ್ವಾಮಿ ವಿವೇಕಾನಂದರ ಜೀವನೋಪದೇಶಗಳನ್ನೂ ಹಾಗೂ ವೈದಿಕ ಕಾಲದಿಂದಲೂ ಬೆಳೆದು ಬಂದ ಭಾರತದ ಸಾಂಸ್ಕೃತಿಕ ಪರಂಪರೆಯನ್ನೂ ಚಿತ್ರಿಸುವ ಒಂದು ಚಿತ್ರ ಪ್ರದರ್ಶನ.

ಇಂತಹ ಒಂದು ವಿರಾಟ್ ಯೋಜನೆಗೆ ತಗಲುವ ಖರ್ಚು ಸುಮಾರು ರೂ. ೬೦,೦೦,೦೦೦ ಎಂದು ಅಂದಾಜು ಮಾಡಲಾಗಿದೆ. ಈ ಪವಿತ್ರ ಕಾರ್ಯದಲ್ಲಿ ಸಾರ್ವಜನಿಕರು ಉದಾರವಾಗಿ ದಾನ ಮಾಡುವುದರ ಮೂಲಕ ಮೇಲಿನ ಯೋಜನೆಯನ್ನು ಕಾರ್ಯಗತಗೊಳಿಸಲು ಸಹಾಯ ಹಸ್ತ ನೀಡಬೇಕೆಂದು ಅಲಹಾಬಾದಿನ ರಾಮಕೃಷ್ಣ ವಿವೇಕಾನಂದ ಸೇವಾಶ್ರಮದ ಕಾರ್ಯದರ್ಶಿಗಳಾದ ಸ್ವಾಮಿ ನಿಖಿಲಾತ್ಮಾನಂದಜಿಯವರು ಮನವಿ ಮಾಡಿಕೊಂಡಿದ್ದಾರೆ. ದೇಣಿಗೆಗಳನ್ನು ಚೆಕ್ ಅಥವಾ ಡಿಮಾಂಡ್ ಡ್ರಾಫ್ಟ್ ಮೂಲಕ ಈ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದು:

**ಕಾರ್ಯದರ್ಶಿ,ರಾಮಕೃಷ್ಣ ವಿವೇಕಾನಂದ ಸೇವಾಶ್ರಮ,**
**ವಿವೇಕಾನಂದ ಮಾರ್ಗ,ಮೋತಿಗಂಜ್**
**ಅಲಹಾಬಾದ್ ೨೧೧ ೦೦೩**

ವಿ.ಸೂ. ಪೂರ್ಣಕುಂಭಮೇಳದಲ್ಲಿ ಸ್ನಾನಕ್ಕಾಗಿ ಮುಖ್ಯ ದಿನಗಳು ೯ನೇ ಜನವರಿ ಪುಷ್ಯ ಪೂರ್ಣಿಮೆ, ೧೪ನೇ ಜನವರಿ, ಮಕರ ಸಂಕ್ರಾಂತಿ, ೨೪ನೇ ಜನವರಿ ಮೌನಿ ಅಮಾವಾಸ್ಯೆ, ೨೯ನೆ ಜನವರಿ ವಸಂತ ಪಂಚಮಿ, ೮ನೆ ಫೆಬ್ರುವರಿ ಮಾಘ ಪೂರ್ಣಿಮೆ.

ಪೂರ್ಣ ಕುಂಭಮೇಳದಲ್ಲಿ ಆಶ್ರಮದ ಶಿಬಿರದಲ್ಲಿ ಊಟ ವಸತಿಯ ಸೌಲಭ್ಯವನ್ನು ಪಡೆಯಲಿಚ್ಛಿಸುವವರು ನಿಗದಿತ ಅರ್ಜಿಯಲ್ಲಿ ಅಕ್ಟೋಬರ್ ೧೫ರ ಒಳಗೆ ತಮ್ಮ ವಸತಿಯನ್ನು ಕಾಯ್ದಿರಿಸಿಕೊಳ್ಳತಕ್ಕದ್ದು. ವಿವರಗಳಿಗಾಗಿ ಮೇಲಿನ ವಿಳಾಸಕ್ಕೆ ಬರೆಯಿರಿ. *

## ಮಾನವನ ಉದ್ಧಾರಕ್ಕೆ ಆದರ್ಶಗಳು ಅನಿವಾರ್ಯ

'ಮೋಸ, ವಂಚನೆ, ಅಡ್ಡ ದಾರಿಗಳಿಂದ ಯಾವುದೇ ಮಹತ್ವಪೂರ್ಣ ಸತ್ಕಾರ್ಯ ಅಸಾಧ್ಯ. ಉದ್ದೇಶವಿಲ್ಲದ ಜೀವನವು ಚುಕ್ಕಾಣಿಯಿಲ್ಲದ ದೋಣಿಯಂತೆ' ಎಂದು ಜಮ್ಮು ಮತ್ತು ಕಾಶ್ಮೀರ ರಾಮಕೃಷ್ಣ ಮಿಷನ್ನಿನ ಕಾರ್ಯದರ್ಶಿಗಳಾದ ಪೂಜ್ಯ ಸ್ವಾಮಿ ಗಿರಿಜೇಶಾನಂದಜೀಯವರು ಅಭಿಪ್ರಾಯಪಟ್ಟರು. ಅವರು ತುಮಕೂರಿನ ರಾಮಕೃಷ್ಣ-ವಿವೇಕಾನಂದ ಆಶ್ರಮದ ವತಿಯಿಂದ ಡಾ. ಗುಬ್ಬಿ ವೀರಣ್ಣ ಕಲಾಕ್ಷೇತ್ರದಲ್ಲಿ ನಡೆದ 'ಚಿಂತನ ಧಾರಾ' ಎಂಬ ವಿಶೇಷ ಸತ್ಸಂಗ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

'ನಮ್ಮ ಜೀವನದಲ್ಲಿ ನಿರ್ದಿಷ್ಟವಾದ, ಸ್ಪಷ್ಟವಾದ ಉದ್ದೇಶವನ್ನು ಹೊಂದುವುದೇ ಗುರಿ. ಗುರಿ ಎಂದರೆ ತಾತ್ಕಾಲಿಕ ಅಭಿಲಾಷೆಯಲ್ಲ. ನಮ್ಮ ಅಪೇಕ್ಷೆ, ಆಕಾಂಕ್ಷೆಗಳಿಗೆ ಪವಿತ್ರವಾದ ದೃಷ್ಟಿಕೋನವಿರಬೇಕು. ಸದಾಚಾರಗಳಿಂದ ಮಾತ್ರ ಸತ್ಕಾರ್ಯ ಸಾಧ್ಯ. ನಮ್ಮ ಜೀವನದ ರೀತಿಯನ್ನು ಉನ್ನತ ಆದರ್ಶದ ಮಟ್ಟಕ್ಕೆ ಏರಿಸಬೇಕೇ ಹೊರತು ಆದರ್ಶವನ್ನೇ ಕೆಳಗೆಳೆದು ಅಪಮೌಲ್ಯಗೊಳಿಸಬಾರದು. ಅತ್ಯುನ್ನತ ಗುರಿಯನ್ನು ಪ್ರೀತಿಸುವುದನ್ನೇ ವೈರಾಗ್ಯವೆನ್ನುವುದು.

ಪ್ರತಿಕ್ಷಣವೂ ನಮ್ಮನ್ನು ನಾವು ಕಾಪಾಡಿಕೊಳ್ಳಬೇಕೆಂಬ ವಿವೇಕ ಉದಿಸುವುದು ಸತ್ಸಂಗದಿಂದ. ಸದ್ವಿಚಾರವು ನಮ್ಮನ್ನು ಸನ್ಮಾರ್ಗ ದಲ್ಲಿ ಕೊಂಡೊಯ್ಯುತ್ತದೆ' ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಆದಾಯ ತೆರಿಗೆ ಅಧಿಕಾರಿಗಳಾದ ಶ್ರೀ ಕೆ.ಟಿ. ಹನುಮಂತರಾಯಪ್ಪನವರು ವಿಶೇಷ ಆಹ್ವಾನಿತ ರಾಗಿದ್ದರು. ಆಶ್ರಮದ ಅಧ್ಯಕ್ಷರಾದ ಸ್ವಾಮಿ ವೀರೇಶಾನಂದರು ಸ್ವಾಗತಿಸಿದರು. ಶಿಕ್ಷಣ ತಜ್ಞ ಶ್ರೀ ಬಿ.ಜಿ. ಶಿವಶಂಕರ್ ವಂದಿಸಿದರು. *

## ವಿವೇಕಾನಂದ ಸಾಂಸ್ಕೃತಿಕ ಕೇಂದ್ರ : ಶಿಲ್ಲಾಂಗ್‌ನಲ್ಲಿ ಸ್ವಾಮಿ ವಿವೇಕಾನಂದರ ಸ್ಮಾರಕ

ಸ್ವಾಮಿ ವಿವೇಕಾನಂದರು ಸುಂದರವಾದ ಶಿಲ್ಲಾಂಗ್ ನಗರಕ್ಕೆ ೧೯೦೧ರ ಏಪ್ರಿಲ್‌ನಲ್ಲಿ ಭೇಟಿಯಿತ್ತು ಅಲ್ಲಿ ಎರಡು ವಾರ ತಂಗಿದ್ದರು. ಈ ಅವಧಿಯಲ್ಲಿ ಕ್ವಿಂಟನ್ ಮೆಮೋರಿಯಲ್ ಭವನವನ್ನು ಉದ್ಘಾಟಿಸಿ ಭಾರತೀಯ ಸಂಸ್ಕೃತಿಯ ಬಗ್ಗೆ ಉಪನ್ಯಾಸವನ್ನು ನೀಡಿದ್ದರು.

ಈ ಭವನದ ಸಮಸ್ತ ಆಸ್ತಿಯನ್ನು ಇದರ ಟ್ರಸ್ಟಿಗಳು ೧೯೯೩ರಲ್ಲಿ ರಾಮಕೃಷ್ಣ ಮಿಷನ್ನಿಗೆ ಹಸ್ತಾಂತರಿಸಿದರು. ಈಗ ಇದು ವಿವೇಕಾನಂದ ಸಾಂಸ್ಕೃತಿಕ ಕೇಂದ್ರ ಎಂದು ಕರೆಯಲ್ಪಟ್ಟು ಸಾರ್ವಜನಿಕ ಗ್ರಂಥಾಲಯ, ಉಚಿತ ಔಷಧಾಲಯ ಮುಂತಾದ ಸೇವಾಕಾರ್ಯಗಳನ್ನು ನಡೆಸುತ್ತಿದ್ದರೂ ಕಟ್ಟಡವು ತುಂಬ ಜೀರ್ಣ ಗೊಂಡಿದ್ದು ಸೇವಾಕಾರ್ಯಗಳನ್ನು ಉತ್ತಮ ಪಡಿಸುವುದಾಗಲಿ ಅಥವಾ ವಿಸ್ತರಿಸುವುದಾಗಲಿ ಸಾಧ್ಯವಾಗುತ್ತಿರಲಿಲ್ಲ.

ಅಂತೆಯೆ ಕಟ್ಟಡದ ಪುನರ್ನಿರ್ಮಾಣಕ್ಕಾಗಿ ಯೋಜನೆಯನ್ನು ರೂಪಿಸಿಕೊಂಡಿದ್ದು, ಕಳೆದ ೧೯೯೯ರ ಮಾರ್ಚ್ ೨೫ರ ರಾಮ ನವಮಿಯಂದು ಭೂಮಿಪೂಜೆ ಮಾಡಲಾಯಿತು. ಎರಡಂತಸ್ತಿನ ಕಟ್ಟಡದಲ್ಲಿ ಈ ಕೆಳಕಂಡ ಸೇವಾಕಾರ್ಯಗಳನ್ನು ನಡೆಸುವ ಯೋಜನೆಯಿದೆ :

೧) ಕಾಲೇಜು ವಿದ್ಯಾರ್ಥಿಗಳಿಗಾಗಿ ಒಂದು ಸುಸಜ್ಜಿತ ಗ್ರಂಥಾಲಯ

೨) ವಿದ್ಯಾರ್ಥಿಗಳಿಗಾಗಿ ಉಚಿತ ತರಗತಿಗಳು

೩) ಯುವಕರಿಗೊಂದು ಸಲಹಾ ಕೇಂದ್ರ

೪) ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯ

೫) ಈಶಾನ್ಯ ಭಾಷೆಗಳ ಒಂದು ಶಾಲೆ

೬) ಒಂದು ಸಭಾಂಗಣ

೭) ಒಂದು ಸುಸಜ್ಜಿತ ಔಷಧಾಲಯ

ಕಟ್ಟಡದ ನಿರ್ಮಾಣಕ್ಕಾಗಿ ಸುಮಾರು ರೂ. ೭೦,೦೦,೦೦೦ ತಗಲುವುದೆಂದು ಅಂದಾಜು ಮಾಡಲಾಗಿದೆ. ಸಾರ್ವಜನಿಕರು ಹಾಗೂ ಭಕ್ತಾದಿಗಳು ಉದಾರವಾಗಿ ದಾನಮಾಡುವುದರ ಮೂಲಕ ಮೇಲಿನ ಸೇವಾಕಾರ್ಯಗಳ ಯೋಜನೆಯನ್ನು ಕಾರ್ಯಗತ ಗೊಳಿಸಲು ಸಹಾಯ ಹಸ್ತ ನೀಡಬೇಕೆಂದು ರಾಮಕೃಷ್ಣ ಮಿಷನ್ ಶಿಲ್ಲಾಂಗಿನ ಕಾರ್ಯದರ್ಶಿಗಳಾದ ಸ್ವಾಮಿ ಜಗದಾತ್ಮಾನಂದಜಿ ಯವರು ಮನವಿ ಮಾಡಿಕೊಂಡಿದ್ದಾರೆ. ದೇಣಿಗೆಗಳನ್ನು ಈ ಕೆಳಕಂಡ ವಿಳಾಸಕ್ಕೆ ಚೆಕ್ ಅಥವಾ ಡಿಮಾಂಡ್ ಡ್ರಾಫ್ಟ್ ಮೂಲಕ ಕಳುಹಿಸಬಹುದು:

ಕಾರ್ಯದರ್ಶಿ, ರಾಮಕೃಷ್ಣ ಮಿಶನ್,
ರಾಮಕೃಷ್ಣ ಮಿಶನ್ ರೋಡ್,
ಶಿಲಾಂಗ್ ೭೯೩ ೦೦೩ *

---

ನೀವು ಯಾರಿಗೂ ಸಹಾಯ ಮಾಡಲಾರಿರಿ. ಬೇಕಾದರೆ ನೀವು ಸೇವೆ ಮಾಡಬಹುದು ಅಷ್ಟೇ. ನೀವು ಭಗವಂತನ ಮಕ್ಕಳನ್ನು ಪೂಜಿಸ ಬಹುದು ; ನಿಮಗೆ ಆ ಸುಯೋಗ ದೊರಕಿದರೆ ಆತನನ್ನೇ ಪೂಜಿಸ ಬಹುದು. ಭಗವಂತನು ತನ್ನ ಮಕ್ಕಳ ಸೇವೆಗೆ ನಿಮಗೆ ಅವಕಾಶ ಒದಗಿಸಿಕೊಟ್ಟರೆ ನೀವೇ ಧನ್ಯರು ಎಂದು ಭಾವಿಸಿ. ನಿಮ್ಮ ಸಮಾನ ವಿಲ್ಲವೆಂದು ಭಾವಿಸಬೇಡಿ. ಆ ಸದವಕಾಶ ಇತರರಿಗೆ ದೊರೆಯದೆ ಇರುವಾಗ ನಿಮಗೆ ದೊರೆತುದಕ್ಕೆ ನೀವೇ ಧನ್ಯರು. ಅದನ್ನು ಒಂದು ಪೂಜೆಯಂತೆ ಮಾಡಿ.

ಅವನಿಗೆ ಸೇವೆ ಮಾಡುವ ಒಂದು ಅವಕಾಶ ದೊರಕಿದುದರಿಂದ ಧನ್ಯರು ನೀವು. ಅವನಿಗೆ ನಾವು ಸಹಾಯ ಮಾಡಲಾರೆವು. ಸಹಾಯ ಎಂಬ ಪದವನ್ನು ನಿಮ್ಮ ಮನಸ್ಸಿನಿಂದ ನಿರ್ಮೂಲ ಮಾಡಿ. ನೀವು ಸಹಾಯ ಮಾಡಲಾರಿರಿ. ಇದು ಈಶ್ವರನಿಂದೆ. ಅವನ ಇಚ್ಛೆ ಯಂತೆ ನೀವು ಇಲ್ಲಿರುವಿರಿ. ಅವನಿಗೆ ನೀವು ಸಹಾಯ ಮಾಡುವಿರಿ ಎಂದು ಭಾವಿಸಿರುವಿರೇನು? ಅವನನ್ನು ನೀವು ಪೂಜಿಸಬಲ್ಲಿರಿ ಅಷ್ಟೇ. ನೀವು ನಾಯಿಗೊಂದು ತುತ್ತು ಅನ್ನವನ್ನು ಕೊಟ್ಟರೆ ನೀವು ನಾಯಿಯೆನ್ನು ದೇವರೆಂದು ಪೂಜಿಸುತ್ತಿದ್ದೀರಿ ಎಂದೇ ಅರ್ಥ. ಕಾರಣ ಆ ನಾಯಿಯಲ್ಲಿರುವವನು ದೇವರೇ. ಅವನೇ ಸರ್ವವೂ ಆಗಿದ್ದಾನೆ.

ಸತ್ಕಾರ್ಯವನ್ನು ಮಾಡಿ ಅದರಿಂದ ತಾನು ಒಳ್ಳೆಯದನ್ನು ಪಡೆಯುವವನು ಯಾರೆಂದರೆ, ಸಮಬುದ್ಧಿಯುಳ್ಳವನು, ಶಾಂತನು, ವಿವೇಕಿಯು, ಗಾಬರಿಪಡದವನು, ಅಧಿಕವಾದ ಸಹಾನುಭೂತಿ ಪ್ರೇಮಗಳುಳ್ಳವನು. ನಾವು ಸ್ವತಃ ಪರಿಶುದ್ಧರಾಗಿರುವುದು, ಇತರರಿಗೆ ಒಳ್ಳೆಯದನ್ನು ಮಾಡುವುದು— ಇದೇ ಎಲ್ಲ ಪೂಜೆಯ ಸಾರ. ಯಾರು ದೀನರಲ್ಲಿ, ದುರ್ಬಲರಲ್ಲಿ, ರೋಗಿಗಳಲ್ಲಿ ಶಿವನನ್ನು ನೋಡುವವರೋ ಅವರೇ ನಿಜವಾಗಿ ಶಿವನನ್ನು ಪೂಜಿಸುವವರು. ಒಬ್ಬನು ಕೇವಲ ವಿಗ್ರಹದಲ್ಲಿ ಮಾತ್ರ ಶಿವನನ್ನು ನೋಡಿದರೆ ಅವನ ಪೂಜೆ ಬರಿಯ ಗೌಣ.

ಸ್ವಾಮಿ ವಿವೇಕಾನಂದ